ಎನಿಸಿತು. ಆಗ ಬ್ರೇನ್‌ಸ್ಟಾರ್ಮಿಂಗ್ ಅವಧಿಯಲ್ಲಿ ನಾನು, ಕರ್ನಾಟಕದಲ್ಲಿ ಅತಿ ಜನಪ್ರಿಯವೆನಿಸಿದ, ಸೂರ್ಯೋದಯಕ್ಕೆ ತನ್ನ ಹುಂಜವೇ ಕಾರಣವೆಂದು ಅಜ್ಜಿ ಜಂಬಪಡುವ ಜನಪದ ಕಥೆಯನ್ನು ಹೇಳಿದೆ. ಎಲ್ಲರೂ ಮೆಚ್ಚಿ ನಿರ್ಧರಿಸಿದ ನಂತರ ಇದನ್ನೇ ಒಂದು ಸಂಪೂರ್ಣ ಕಥೆಯಾಗಿ ವಿಸ್ತರಿಸಿ ಸ್ಕ್ರೀನ್‌ಪ್ಲೇ ಬರೆದು ನಿರ್ದೇಶಿಸಿದೆ. ಈ ಕಿರುಚಿತ್ರ ಮೊದಲ ಬಾರಿಗೆ ನನ್ನ ಕೌಶಲಕ್ಕೆ ಒರೆಗಲ್ಲಾಗಿತ್ತು' ಎಂದು ನೆನಪಿಸಿಕೊಂಡರು ಚಿದಾನಂದ್.

16 ನಿಮಿಷದ ಕಥೆಯನ್ನು ನಾಲ್ಕು ದಿನಗಳ ಅವಧಿಯಲ್ಲಿ ರೂಪಿಸಲಾಗಿದೆ. ಕಥೆ ಹೇಳಲು ಹೊಸ ಧಾಟಿಯನ್ನು ಪ್ರಯೋಗಿಸಿ, ಆಧುನಿಕ ಸಿನಿಮಾ ತಂತ್ರಗಳನ್ನು ಬಳಸಿ ಜನಪದ ಕಥೆಗೆ ಹೊಸ ಮೆರುಗು ನೀಡಲಾಗಿದೆ.

ಕಿರುಚಿತ್ರದ ಚಿತ್ರೀಕರಣ ಸವಾಲಿನ ಜೊತೆಗೆ ಹೊಸ ಕಲಿಕೆಗೂ ಪ್ರೇರಣೆಯಾಯಿತು ಎನ್ನುವ ಚಿದಾನಂದ ಅವರಿಗೆ, ತಂಡವೂ ಹುರುಪಿನಿಂದ ಸಾಥ್ ನೀಡಿದೆ. ಪ್ರತಿ ಶಾಟ್ ಅತಿ ಅಚ್ಚುಕಟ್ಟಾಗಿರಬೇಕೆಂದು ಪರಿಶ್ರಮದಿಂದ ಕೆಲಸ ಮಾಡಿದೆ. ಈ ಶ್ರಮಕ್ಕೆ ತಕ್ಕ ಪ್ರತಿಫಲವಾಗಿ ಈ ಬಾರಿಯ, 77ನೇ ಕಾನ್ಸ್ ಚಿತ್ರೋತ್ಸವದಲ್ಲಿ **'Sunflowers were the first ones to know'** (ಸೂರ್ಯಕಾಂತಿ ಹೂಗೇ ಮೊದಲು ಗೊತ್ತಾಗಿದ್ದು) ಕಿರುಚಿತ್ರಕ್ಕೆ 'ಲಾ ಸಿನೆಫ್' ವಿದ್ಯಾರ್ಥಿ ವಿಭಾಗದಲ್ಲಿ 'ಅತ್ಯುತ್ತಮ ಕಿರುಚಿತ್ರ' ಪ್ರಶಸ್ತಿ ಲಭಿಸಿದೆ.



2263 ಕಿರುಚಿತ್ರಗಳಲ್ಲಿ 18 ಚಿತ್ರಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿ, ಕೊನೆಗೆ 'ಸೂರ್ಯಕಾಂತಿ ಹೂಗೇ... ' ಕಿರುಚಿತ್ರಕ್ಕೆ ಪ್ರಶಸ್ತಿ ಲಭಿಸಿದ್ದು, ಕನ್ನಡಕ್ಕೆ ಸಿಕ್ಕ ಜಾಗತಿಕ ಮನ್ನಣೆಯೂ ಆಗಿದೆ.

ಒಬ್ಬ ಕನ್ನಡಿಗನಾಗಿ ಈ ಪ್ರಶಸ್ತಿಯು ತಮಗೆ ಎಷ್ಟು ಮುಖ್ಯ ಎಂಬುದನ್ನು ಸಂತಸದಿಂದ ಹೇಳಿಕೊಳ್ಳುವ ಅವರು, 'ಭಾರತವನ್ನು, ಅದರಲ್ಲೂ ಕನ್ನಡವನ್ನು ಜಾಗತಿಕ ವೇದಿಕೆಯಲ್ಲಿ ಪ್ರತಿನಿಧಿಸಿದ್ದು ನನಗೆ ತುಂಬಾ ಸಂತೋಷ ತಂದಿದೆ. ನನ್ನ ಹೃದಯ ಕೃತಜ್ಞತೆಯಿಂದ ತುಂಬಿದೆ. ಇದು ನನ್ನೊಬ್ಬನಿಗೆ ದೊರೆತ ರೆಕಗ್ನಿಷನ್ ಅಲ್ಲ, ನನ್ನ ಬೆಂಬಲಕ್ಕೆ ನಿಂತ ಎಲ್ಲರದ್ದೂ' ಎನ್ನುತ್ತಾರೆ.

ಕಾನ್ಸ್ ಪ್ರಶಸ್ತಿ, ಚಿದಾನಂದ್ ಅವರ ಕಣ್ಣಿನಲ್ಲಿ ಈಗ ನೂರಾರು ಕನಸುಗಳನ್ನು ತುಂಬಿದೆ. ಒಂದೇ ರೀತಿಯ ಕಥಾವಸ್ತುಗಳಿಗೆ ಸೀಮಿತವಾಗದೆ, ಸೃಜನಾತ್ಮಕವಾಗಿ ಸಿನಿಮಾರಂಗದಲ್ಲಿ ಪ್ರಯೋಗಗಳನ್ನು ಮಾಡುವ ಹಂಬಲವೂ ಜೊತೆಯಾಗಿದೆ.

'ನನ್ನನ್ನು ನಾನು ನನ್ನ ಸಿನಿಮಾಗಳ ಮೂಲಕ ಅಭಿವ್ಯಕ್ತಗೊಳಿಸಲು ಇಷ್ಟಪಡುತ್ತೇನೆ. ಭಾವನಾತ್ಮಕವಾಗಿ ಹಾಗೂ ಕಲಾತ್ಮಕವಾಗಿ ಪ್ರೇಕ್ಷಕರಲ್ಲಿ ಒಂದಾಗುವಂಥ ಚಿತ್ರಗಳನ್ನು ನೀಡಲು ಇಷ್ಟಪಡುತ್ತೇನೆ. ಬದುಕಿಗೆ ಬ್ಲೂ ಪ್ರಿಂಟ್ ಎನ್ನುವುದು ಇರುವುದಿಲ್ಲ. ಹೀಗಾಗಿ ನನಗೆ ಖುಷಿ ಕೊಡುವ ಕೆಲಸದಲ್ಲಿ ತೊಡಗಿಕೊಳ್ಳುತ್ತೇನೆ' ಎನ್ನುತ್ತಲೇ, ಸದ್ಯಕ್ಕೆ ಚಿತ್ರೋದ್ಯಮದಲ್ಲಿ ತಮಗೆ ಕಾಣುತ್ತಿರುವ ಸವಾಲಿನ ಬಗ್ಗೆಯೂ ಮಾತನಾಡುತ್ತಾರೆ.

'ಮನುಷ್ಯನ ಇಡೀ ದೇಹವನ್ನು ಅರ್ಥ ಮಾಡಿಕೊಳ್ಳಲು ಶ್ವಾಸಕೋಶವನ್ನು ಮಾತ್ರ ವಿಶ್ಲೇಷಣೆ ಮಾಡಿದರೆ ಆಗುತ್ತದೆಯೇ? ಅದೇ ರೀತಿ ಸಿನಿಮಾಗಳನ್ನು ಮನರಂಜನಾ ವರ್ಗ ಎಂದಷ್ಟೇ ಸೀಮಿತಗೊಳಿಸುತ್ತಿರುವುದು ಈ ಹೊತ್ತಿನ ಸವಾಲು. ಸಿನಿಮಾ ಬಲಿಷ್ಠ ಹಾಗೂ ಅತಿ ಸುಂದರ ಮಾಧ್ಯಮ. ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಿದೆ. ನಾನು ಸಿನಿಮಾ ಹಾದಿಯನ್ನು ಮನ್ನಣೆಗಾಗಿ ಆರಿಸಿಕೊಂಡಿಲ್ಲ. ನಮ್ಮ ಸಿನಿಮಾಗಳು ಜಾಗತಿಕ ಮಟ್ಟಕ್ಕೆ ತಲುಪಬೇಕು. ವಿಶ್ವ ಪ್ರೇಕ್ಷಕರೂ ನೋಡುವಂತಿರಬೇಕು' ಎಂದು ಹೇಳುತ್ತಾರೆ.

ಸದ್ಯಕ್ಕೆ, ದೊಡ್ಡ ವರ್ಗದ ಪ್ರೇಕ್ಷಕರನ್ನು ತಲುಪುವ ಗುರಿಯೊಂದಿಗೆ ಕಮರ್ಷಿಯಲ್ ಸಿನಿಮಾ ಪ್ರಾಜೆಕ್ಟ್ ಕೆಲಸದಲ್ಲಿ ಚಿದಾನಂದ್ ತೊಡಗಿಕೊಂಡಿದ್ದಾರೆ. ಅವರ ಪ್ರಯತ್ನ ಯಶಸ್ವಿಯಾದಲ್ಲಿ, ಜನಪ್ರಿಯತೆಯೊಂದಿಗೆ ಜನಪರತೆಯೂ ಮಿಳಿತಗೊಂಡ ಕಲಾಕೃತಿಯೊಂದು ಸಹೃದಯರಿಗೆ ದೊರೆಯಲಿದೆ.

ಪ್ರತಿಕ್ರಿಯಿಸಿ: **feedback@sudha.co.in**



# ಹಾಡುವ ಹುಮ್ಮಸ್ಸಿನಲ್ಲಿ ವಸಿಷ್ಠ

ಈಚೆಗೆ ಬಿಡುಗಡೆಯಾಗಿರುವ 'ಲವ್‌ಲಿ' ಸಿನಿಮಾದಲ್ಲಿ ನಟ ವಸಿಷ್ಠ ಸಿಂಹ ಮಲ್ಟಿಪಲ್ ಶೇಡ್‌ನಲ್ಲಿ ಕಾಣಿಸಿಕೊಂಡಿರುವುದು ಮಾತ್ರವಲ್ಲ, ಆ ಸಿನಿಮಾದಲ್ಲಿ 'ಬಯಸಿ ಬಯಸಿ' ಎಂಬ ಹಾಡಿಗೂ ದನಿಯಾಗಿದ್ದಾರೆ. ವಸಿಷ್ಠ ಸಿಂಹ ಮ್ಯಾನರಿಸಂನಲ್ಲಿ ಅವರ ವಿಭಿನ್ನ ಧ್ವನಿಯೂ ಸೇರುತ್ತದೆ. ಹಾಗೇ ಹಾಡಿನಲ್ಲೂ ಆ ಧ್ವನಿಯನ್ನು ದುಡಿಸಿಕೊಳ್ಳಲು ತಮಗೆ ಇಷ್ಟ ಎಂದು ಅವರು ಹೇಳಿಕೊಂಡಿದ್ದಾರೆ.

'ಹಾಡುವುದು ನನಗೆ ತುಂಬಾ ಇಷ್ಟ. ಅದು ನನ್ನ ಮೊದಲ ಪ್ರೀತಿ. ಸಂಗೀತ ನಿರ್ದೇಶಕರು ನಾನು ಹಾಡುವುದಕ್ಕೆ ಅವಕಾಶ ನೀಡುತ್ತಿರುವುದು ಸಂತೋಷದ ಸಂಗತಿ. ನಟನೆಯಲ್ಲಿ ಏಕತಾನತೆ ಕಾಡಿದರೆ, ಹಾಡು ಹಾಡುವುದು ಸ್ವಲ್ಪ ರಿಫ್ರೆಶಿಂಗ್ ಎನಿಸುತ್ತದೆ. ಸಂಗೀತದ ಮಾಧುರ್ಯದಲ್ಲಿ ಕಳೆದುಹೋಗಲು ಒಂದು ಅವಕಾಶವೂ ಆಗುತ್ತದೆ' ಎಂದು ತಮ್ಮ ಮನದ ಲಹರಿ ಹರಿಸಿದ್ದಾರೆ.

ಈ ಮುನ್ನ ಕಿರಿಕ್ ಪಾರ್ಟಿ, ಜಂಟಲ್‌ಮ್ಯಾನ್, ರಾಮಾರ್ಜುನ, ದಯವಿಟ್ಟು ಗಮನಿಸಿ ಸಿನಿಮಾಗಳಲ್ಲಿ ವಸಿಷ್ಠ ಸಿಂಹ ಹಾಡಿದ್ದರು.

ಸಿನಿಮಾಗಳ ಸ್ಕ್ರಿಪ್ಟ್ ಆಯ್ಕೆ ಕುರಿತು ಈ ಸಂದರ್ಭದಲ್ಲಿ ಮಾತು ಹಂಚಿಕೊಂಡಿದ್ದಾರೆ.

'ನಾನು ತೆಗೆದುಕೊಳ್ಳುವ ಪಾತ್ರ ನನ್ನೊಂದಿಗೆ ನಾನು ಸವಾಲೊಡ್ಡುವಂತಿರಬೇಕು. ನನ್ನನ್ನು ಕಲಿಕೆಗೆ ಪ್ರೇರೇಪಿಸುವ ಅಂಶ ಇರಬೇಕು' ಎಂದು ಹೇಳಿದ್ದಾರೆ. ಅವರ ನಟನೆಯ ತೆಲುಗು ಸಿನಿಮಾ 'ಯೇವಂ' ಕೂಡ ಬಿಡುಗಡೆಯಾಗಿದೆ.